**CC 5125/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ಹೊಸಪೇಟೆ.**
**ಸಿಸಿ ನಂಬರ್ 5125/2023**

**ಸಿ ಡಬ್ಲ್ಯೂ 7**
**ಪಿ ಡಬ್ಲ್ಯೂಃ 4**

| | |
|---|---|
| **ಸಾಕ್ಷಿಯ ಹೆಸರು -** | **ಶರಣಪ್ಪ ಹೆಚ್** |
| **ತಂದೆಯ ಹೆಸರು -** | **ಕೆಂಚಪ್ಪ** |
| **ವಯಸ್ಸು -** | **42 ವರ್ಷಗಳು** |
| **ಉದ್ಯೋಗ -** | **ಪೇದೆ, ಹೊಸಪೇಟೆ ಸಂಚಾರಿ ಪೋಲಿಸ್ ಠಾಣೆ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ 06-06-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು ಜನವರಿ **2022** ರಿಂದ ಆಗಸ್ಟ್ **2024** ರವರೆಗೆ ಹಂಪಿ ಪ್ರವಾಸಿ ಪೋಲಿಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **24.06.2023** ರಂದು ನಾನು ಮನೆಯಲ್ಲಿದ್ದಾಗ ಬೆಳಿಗ್ಗೆ **6.30** ಗಂಟೆಗೆ ಚಾಸಾ **1** ರವರು ಕರೆಮಾಡಿ ಗೌತಮ್ ಮತ್ತು ಮಂಜುನಾಯಕ್ ಎಂಬ ಹುಡುಗರು ಕಡ್ಡಿ ರಾಂಪುರದ ಉದ್ದನಪ್ಪನ ತೋಟಕ್ಕೆ ಹೋಗುವ ಕಚ್ಚಾ ರಸ್ತೆಯಲ್ಲಿ ಗಾಂಜ ಮಾರಾಟ ಮಾಡುತಿದ್ದಾರೆ ಎಂದು ಮಾಹಿತಿ ಬಂದಿದೆ ದಾಳಿ ಮಾಡಲು ಬನ್ನಿ ಎಂದು ಕರೆದರು. ಚಾಸಾ **6** ರನ್ನು ಬುಕ್ಕಸಾಗರದಿಂದ ಕರೆದುಕೊಂಡು ಬರಲು ನನಗೆ ತಿಳಿಸಿದರು. ಚಾಸಾ **2** ಮತ್ತು **3** ರನ್ನು ಸಹ ನಾನೇ ಕರೆದುಕೊಂಡು ಹೋಗಿದ್ದೆ. ಠಾಣೆಯಿಂದ ಜೀಪಿನಲ್ಲಿ ಚಾಸಾ **1** ರವರು, ಪಂಚರು ಮತ್ತು ಚಾಸಾ **6** ಹಾಗೂ ಮೋಟಾರು ಸೈಕಲು ಗಳಲ್ಲಿ **6** ಜನ ಸಿಬಂದಿಗಳು ಹೊರೆಟೆವು. ಬೆಳಿಗ್ಗೆ **8** ಗಂಟೆಗೆ ಬಾತ್ಮಿ ಬಂದಿದ್ದ ಸ್ಥಳ ಹತ್ತಿರ ಹೋಗಿ ನೋಡಲಾಗಿ ಇಬ್ಬರು ಹುಡುಗರು , ಜೇಬಿನಿಂದ ಗಾಂಜ ತೆಗೆದು ಮಾರಾಟ ಮಾಡವುದು ಕಂಡುಬಂದಿತು. ನಾವು ದಾಳಿ ಮಾಡಿದಾಗ ಅವರು ಓಡಿಹೋಗಲು ಪ್ರಯತ್ನಿಸಿದರು . ಸದರಿಯವರನ್ನು ನಾನು

ಚಾಸಾ 11 ಮತ್ತು 12 ರವರು ಹಿಂಬಾಲಿಸಿ ಹಿಡಿದಿರುತ್ತೇವೆ. ಸದರಿಯವರನ್ನು ವಿಚಾರಿಸಿದಾಗ ಅವರ ಹೆಸರು ಗೌತಮ್ ತಂದೆ ಗೋಪಿನಾಯಕ ಸಾಕೀನ್ ಕಡ್ಡಿ ರಾಂಪುರ ಮತ್ತು ಮಂಜುನಾಯಕ ತಾಯಿ ಪಾರ್ವತಿ ಬಾಯಿ ಸಾಕೀನ್ ಕಡ್ಡಿ ರಾಂಪುರ ಎಂದು ತಿಳಿಸಿದರು. ಸದರಿಯವರಿಗೆ ಅಂಗ ಶೋಧನೆಯ ನೋಟಿಸು ನೀಡಿ ಅವರ ಅಂಗ ಶೊದನೆ ಮಾಡಿದಾಗ ಇಬ್ಬರ ಹತ್ತಿರವು ಒಂದೊಂದು ಪ್ಲಾಸ್ಟಿಕ್ ಕವರ ಗಳಲ್ಲಿ ಗಾಂಜ ಇದ್ದದ್ದು ಕಂಡುಬಂದಿತು. ಸದರಿ ಗಾಂಜವನ್ನು ಚಾಸಾ 1 ರವರು ಪಂಚರು ಮತ್ತು ಚಾಸಾ 6 ರ ಸಮಕ್ಷಮ ಜಪ್ತು ಪಡಿಸಿದರು. ಆ ಸಮಯದಲ್ಲಿ ಚಾಸಾ 16 ರವರ ಸಹಾಯದಿಂದ ಗಾಂಜವನ್ನು ತೂಕ ಮಾಡಿಸಲಾಯಿತು. ಎರಡು ಕವರುಗಳಲ್ಲಿನ ಗಾಂಜ ಒಟ್ಟು 220 ಗ್ರಾಂ ಇತ್ತು ಮತ್ತು ಕವರ್ ಇಲ್ಲದೆ ತೂಕ ಮಾಡಿದಾಗ 200 ಗ್ರಾಂ ಇತ್ತು . ಸದರಿ ಪಂಚನಾಮೆಯನ್ನು ಚಾಸಾ 11 ರವರು ವೀಡಿಯೋ ಮಾಡಿರುತ್ತಾರೆ. ಪಂಚನಾಮೆ ಬೆಳಿಗ್ಗೆ 8.45 ರಿಂದ 10.15 ರವರೆಗೆ ನಡೆಯಿತು. ಆರೋಪಿತರನ್ನು ಕರೆದುಕೊಂಡು ಮತ್ತು ಮು.ಮಾ ಅನ್ನು ತೆಗೆದುಕೊಂಡು ಠಾಣೆಗೆ ಹಿಂತಿರುಗಿರುತ್ತೇವೆ . ನಾನು ತನಿಖಧಿಕಾರಿ ಮುಂದೆ ಹೇಳಿಕೆ ನೀಡಿದ್ದೇನೆ. ಆರೋಪಿತರನ್ನು ನೋಡಿದರೆ ಗುರುತಿಸುತೇನೆ. ಸಾಕ್ಷಿ ನ್ಯಾಯಾಲದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ನಾನು ಪಂಚನಾಮೆಯಲ್ಲಿ ಸಹಿ ಹಾಕಿದ್ದೇನೆ. ಸಾಕ್ಷಿ ನಿ.ಪಿ 2 ರ ಸಹಿ ನೋಡಿ ಗುರುತಿದ್ದು ಅದನ್ನು ನಿ.ಪಿ 2 ಡಿ ಎಂದು ಗುರುತಿಸಲಾಯಿತು. ಗಾಂಜ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮು.ಮಾ ನೋಡಿ ಗುರುತಿಸುತ್ತಾರೆ. ಸಾಕ್ಷಿ ನಿ.ಪಿ 4 ರಲ್ಲಿನ 10 ಫೋಟೊ ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಆರ್ ವಕೀಲರಿಂದ**

ನಾನು ಠಾಣೆಯಿಂದ 4 ಕಿ.ಮಿ ಅಂತರದಲ್ಲಿ ವಾಸವಿದ್ದೇನೆ. ಕಮಲಾಪುರ ಪೋಲಿಸ್ ವಸತಿ ಗೃಹದಲ್ಲಿ ಇರುತ್ತೇನೆ. ನಾನು ಠಾಣೆಗೆ 6.45 ಕ್ಕೆ ಹೋಗಿರುತ್ತೇನೆ. ನಾವು ದಾಳಿಗೆ ಹೋಗುವುದಕ್ಕೂ ಮೊದಲೇ ಆರೋಪಿತರ ವಿರುದ್ದ ಪ್ರ.ವ.ವ

ಅನ್ನು ದಾಖಲಿಸಿದ್ದೇವು ಎಂದರೆ ಸರಿ . ನನಗೆ ಆರೋಪಿತರ ಹೆಸರು ಅವರನ್ನು ಹಿಡಿದು ಕೇಳಿದಾಗಲೇ ಗೊತ್ತಾಗಿದ್ದು ಎಂದರೆ ಸರಿ . ಸಾಕ್ಷಿ ಮುಂದುವರೆದು ಚಾಸಾ **1** ರವರಿಗೆ ಮೊದಲೇ ಗೊತ್ತಿತ್ತು ಎಂದು ನುಡಿಯುತ್ತಾರೆ. ಆ ದಿನ ಯಾವುದೇ ದಾಳಿ ಮಾಡಲು ಹೋಗದಿದ್ದರೂ ಸಹ ಆರೋಪಿತರ ಹೆಸರು ಗೊತಿದ್ದರಿಂದ ಚಾಸಾ **1** ರವರು ಅವರ ವಿರುದ್ದ ಅಂಕಿ ಅಂಶಗಳಿಗಾಗಿ ಈ ಪ್ರಕರಣ ದಾಖಲಿಸಿದ್ದರು ಎಂದರೆ ಸರಿಯಲ್ಲ.

ಬುಕ್ಕಸಾಗರದಿಂದ ಹಂಪಿ **20** ಕಿ.ಮಿ. ಅಂತರದಲ್ಲಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು **10** ಕಿ.ಮಿ. ಅಂತರದಲ್ಲಿದೆ ಎಂದು ನಡಿಯುತ್ತಾರೆ. ನಾನೇ ಪಂಚರಿಗೆ ಕರೆ ಮಾಡಿ ಠಾಣೆಗೆ ಬರುವಂತೆ ತಿಳಿಸಿದ್ದೆ ಎಂದರೆ ಸರಿ . ಸದರಿಯವರು ಠಾಣೆಗೆ ಬಂದ ನಂತರವೇ ಅವರಿಗೆ ನೋಟಿಸು ಜಾರಿ ಮಾಡಿದೆ ಎಂದರೆ ಸರಿ . ದಿ **24.06.2023** ರಂದು ಚಾಸಾ **1** ರವರು ಕರೆ ಮಾಡಿ ಬಾತ್ಮಿ ಬಂದ ಬಗ್ಗೆ ತಿಳಿಸಿದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಠಾಣೆಗೆ ಬೆಳಿಗ್ಗೆ **6.45** ಕ್ಕೆ ಹೋಗಿ ಪಂಚರನ್ನು ಮತ್ತು ಚಾಸಾ **6** ರನ್ನು ಠಾಣೆಗೆ ಕರೆಸಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಪಂಚರಿಗೆ ಠಾಣೆಯಲ್ಲಿ ನೋಟಿಸು ಮಾಡಲಾಯಿತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಪಂಚರು ಮತ್ತು ಪೋಲಿಸ ಸಿಬಂದಿಗಳು ಜೀಪು ಮತ್ತು ಮೋಟರು ಸೈಕಲ ಗಳಲ್ಲಿ ಗುನ್ನಾ ಸ್ಥಳಕ್ಕೆ ಹೋದೆವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಉದ್ದಾನಪುರದ ತೋಟಕ್ಕೆ ಹೋಗುವ ದಾರಿಯಲ್ಲಿ ಆರೋಪಿತರು ಜೇಬಿನಲ್ಲಿ ಪ್ಲಾಸ್ಟಿಕ್ಕ ಚೀಲಗಳಲ್ಲಿ ಗಾಂಜ ಇಟ್ಟುಕೊಂಡು ಮಾರಟ ಮಾಡುತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರನ್ನು ದಾಳಿ ಮಾಡಿ ಹಿಡಿದು ಅಂಗ ಶೋಧನೆ ಮಾಡಿದಾಗ ಅವರ ಬಳಿ ಚೀಲ ಸಹಿತಿ **220** ಗ್ರಾಂ ಗಾಂಜ ದೊರೆಯಿತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಗ

ಶೋಧನೆ ಮಾಡಲು ಆರೊಪಿತರಿಗೆ ಯಾವುದೇ ನೋಟಿಸು ನೀಡಿಲ್ಲ ಎಂದರೆ ಸರಿಯಲ್ಲ.

ನನ್ನ ಸಮಕ್ಷಮ ಯವುದೇ ದಾಳಿ ಆಗಿಲ್ಲ , ಆರೋಪಿತರು ಸ್ಥಳದಲ್ಲಿ ಇರಲಿಲ್ಲ ಮತ್ತು ನಾವುಗಳು ಅವರನ್ನು ಹಿಡಿದು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ದಾಖಲೆ ಸೃಷ್ಟಿಸಿದೇವೆ ಎಂದರೆ ಸರಿಯಲ್ಲ. ಮೇಲಾದಿಕಾರಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.